

# ಶ್ರೀ ಸುಬ್ರಹ್ಮಣ್ಯ ಸಭಾ (ರಿ), ಮಂಗಳೂರು

ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್, ಬಿಜೈ ರಸ್ತೆ, ಕರಂಗಲಪಾಡಿ, ಮಂಗಳೂರು

**ಶತಮಾನೋತ್ಸವ ಸಂಭ್ರಮ**

# ಶ್ರೀ ಸುಬ್ರಹ್ಮಣ್ಯ ಸಭಾ-ಮಂಗಳೂರು "ನೂರು ಹೆಜ್ಜೆ" ವೈಭವ

(...1ನೇ ಪುಟದಿಂದ)

ಶ್ರೀ ಉಮೇಶರಾವ್ಜ್ – ಇಂಜಿನಿಯರ್

ಶ್ರೀ ಅಂಬಲಪಾಡಿ ಕೃಷ್ಣರಾವ್ – ಆದರ್ಶ ವ್ಯಕ್ತಿತ್ವ

ಕಾರ್ಯಕ್ರಮವು ಕು. ಶೀತಲ್‌ಳ ಪ್ರಾರ್ಥನೆಯೊಂದಿಗೆ ಪ್ರಾರಂಭಗೊಂಡಿತು. ಶ್ರೀ ಜಗನ್ನಿವಾಸರಾವ್ ಎಲ್ಲರಿಗೂ ಸ್ವಾಗತವನ್ನು ಕೋರಿದರು. ಶ್ರೀ ಕರುಣರಾವ್ ಬೆಳ್ಳೆಯವರು ವಂದನಾರ್ಪಣೆ ಮಾಡಿದರು.

ಕಾರ್ಯಕ್ರಮವನ್ನು ಶ್ರೀ ನಾಗರಾಜ ರಾವ್ ವರ್ಕಾಡಿ ನಿರೂಪಿಸಿದರು. ಸಭಾ ಕಾರ್ಯಕ್ರಮದ ಬಳಿಕ ಶಿವಬ್ರಾಹ್ಮಣ ಸಭಾ, ಕಾಸರಗೋಡು ಇವರ ಪ್ರಾಯೋಜಕತ್ವದಲ್ಲಿ, ಕಾಸರಗೋಡು ಗೋಪಾಲಕೃಷ್ಣ ಗೊಂಬೆಯಾಟ ತಂಡದಿಂದ ನರಕಾಸುರ ವಧೆ ಹಾಗೂ ಗರುಡ ಗರ್ವಭಂಗ ಎಂಬ ಗೊಂಬೆಯಾಟಗಳು ಪ್ರದರ್ಶಿತವಾದವು.

ಉತ್ತಮವಾಗಿ ಮೂಡಿಬಂದ ಕಾರ್ಯಕ್ರಮ ಎಂಬ ಸಮಾಜ ಬಾಂಧವರ ಮಾನ್ಯತೆ ಶತಮಾನೋತ್ಸವ ಸಮಿತಿಗೆ ದೊಡ್ಡ ಅರ್ಹತಾ ಪತ್ರ ಎಂದರೂ ತಪ್ಪಾಗದು.

ತಾ.17–05–2008

ಶತಮಾನೋತ್ಸವ ಸಂಭ್ರಮದ ಸಾಂಸ್ಕೃತಿಕ ಸಾಮಾಜಿಕ ಕಾರ್ಯಕ್ರಮಗಳು ಎರಡನೇ ದಿನ ರಾಜರ್ಷಿ ಡಾ. ಡಿ. ವೀರೇಂದ್ರ ಹೆಗ್ಗಡೆ, ಧರ್ಮಾಧಿಕಾರಿಗಳು ಶ್ರೀ ಕ್ಷೇತ್ರ ಧರ್ಮಸ್ಥಳ ಇವರ ದಿವ್ಯ ಉಪಸ್ಥಿತಿಯಲ್ಲಿ ವಿಜೃಂಭಣೆಯಿಂದ ನೆರವೇರಿತು.

ಶ್ರೀಮತಿ ಸುಜಾತ ಬೆಳ್ಳೆಯವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಶ್ರೀ ಸುಬ್ರಹ್ಮಣ್ಯ ಸಭೆಯ ಉಪಾಧ್ಯಕ್ಷರಾದ ಶ್ರೀ ಸಿ. ಎಸ್. ರಾವ್ ಸ್ವಾಗತವನ್ನು ಕೋರಿದರು. ಪದ್ಮಭೂಷಣ ರಾಜರ್ಷಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರು "ಇತಿಹಾಸದ ಪುಟಗಳನ್ನು ತೆರೆದಾಗ ನೂರುವರ್ಷ ಎನ್ನುವಂತಹದು ದೊಡ್ಡ ಸಂಖ್ಯೆಯಾಗಿ ಕಾಣುವುದಿಲ್ಲ. ಆದರೆ ಸಹಜವಾಗಿ ನೋಡಿದರೆ ನೂರುವರ್ಷ ಒಂದು ವಿಶೇಷ ಮಹತ್ವವನ್ನು ಪಡೆಯುತ್ತದೆ. ನೂರು ವರ್ಷಗಳ ಹಿಂದಿನ ವಿಶ್ವದ ಆಗು–ಹೋಗುಗಳನ್ನು ಗಮನಿಸಿದಾಗ ಭಾರತದಂತಹ ದೇಶ ಅಷ್ಟಾಗಿ ಅಭಿವೃದ್ಧಿಯನ್ನು ಹೊಂದಿರಲಿಲ್ಲ. ಪಾಶ್ಚ್ಯತ್ಯ ದೇಶಗಳಲ್ಲಿ ಯಂತ್ರಗಳ ಅವಿಷ್ಕಾರ, ವಾಹನಗಳ ಉಪಯೋಗವಾಗಿದ್ದರೂ ಭಾರತದಲ್ಲಿ ಎತ್ತಿನಗಾಡಿ ಗುಡಿಕೈಗಾರಿಕೆಗಳನ್ನೇ ಅವಲಂಭಿಸಿ ಜೀವನ ಸಾಗಿಸುತ್ತಿದ್ದರು. ಅಂತಹ ಸಂದರ್ಭದಲ್ಲಿ ಈ ಸಂಸ್ಥೆಯನ್ನು ಕಟ್ಟಿದ ಹಿರಿಯರು ಶ್ಲಾಘನೀಯರು. ಭೌದ್ಧಿಕ ಬೆಳವಣಿಗೆ, ಸಾಮಾಜಿಕ ಪರಿಸರಕ್ಕೆ ಸ್ಪಂದನೆ ಮುಂತಾದ ವಿಷಯಗಳಿಗೆ ನಮ್ಮ ಪೂರ್ವಜರು ಬಹಳ ಪ್ರಾಮುಖ್ಯತೆ ಕೊಟ್ಟಿದ್ದರು. ಎಲ್ಲಿ ವಿದ್ಯೆ ಇದೆಯೋ ಅಲ್ಲಿ ಯಶಸ್ಸು ಇದೆ ಎಂದು ಅವರು ಕಂಡುಕೊಂಡಿದ್ದರು. ಉದ್ಯೋಗ ಯಾವುದಾದರೂ ಸಣ್ಣದಲ್ಲ. ಮಾಡುವ ಉದ್ಯೋಗದಿಂದ ಯಾರು ಶ್ರೇಷ್ಠರಾಗುವುದಿಲ್ಲ. ನಮಗೆ ಸಿಗುವ ಅವಕಾಶಗಳನ್ನು ಯಾರು ಸರಿಯಾಗಿ ಉಪಯೋಗಿಸಿಕೊಳ್ಳುತ್ತಾರೋ ಅವರು ಜೀವನದಲ್ಲಿ ಮುನ್ನಡೆಯನ್ನು ಸಾಧಿಸುತ್ತಾರೆ. ಮೂರು ವ್ಯಾಪಾರಿಗಳು ಸಮುದ್ರಯಾನಕ್ಕೆ ತೆರಳುತ್ತಾರೆ. ಒಬ್ಬ ವ್ಯಾಪಾರಿ ಮೂಲ ಬಂಡವಾಳ ಸಹಿತ ಎಲ್ಲವನ್ನು ಮೋಜು, ವಿನೋದಗಳಿಗಾಗಿ ಕಳೆದುಕೊಳ್ಳುತ್ತಾನೆ. ಇನ್ನೊಬ್ಬ ವ್ಯಾಪಾರಿ ಮೂಲ ಬಂಡವಾಳವನ್ನು ಹೊರತು ಪಡಿಸಿ ಉಳಿದೆಲ್ಲವನ್ನು ಕಳೆದುಕೊಳ್ಳುತ್ತಾನೆ. ಮೂರನೆಯ ವ್ಯಾಪಾರಿ ಎಚ್ಚರಿಕೆಯಿಂದ ಹಣವ್ಯಯಿಸಿ, ತಾನು ಉಳಿಸಿದ್ದನ್ನು, ಮೂಲ ಬಂಡವಾಳವನ್ನು ಜತೆಗೆ ಹಿಂದೆ ತರುತ್ತಾನೆ. ಸಮಾಜದಲ್ಲಿಯೂ ಈ ರೀತಿಯ ಮೂರು ವರ್ಗದವರಿರುತ್ತಾರೆ. ಮೋಜು, ಐಷಾರಾಮಗಳಿಗಾಗಿ ಎಲ್ಲವನ್ನು ಕಳೆದುಕೊಳ್ಳುವರು. ಹೆಚ್ಚಿನದನ್ನು ಕಳೆದುಕೊಳ್ಳುವರು. ಏನನ್ನೂ ಕಳೆದುಕೊಳ್ಳದೆ ಜೀವನ ಸಾಗಿಸುವವರು. ಈ ಮೂರನೆಯ ವರ್ಗದವರು ಸದಾ ಸ್ಮರಣೀಯರು. ಇಂದು ಇಲ್ಲಿ ಸಾಧಕರನ್ನು ಸನ್ಮಾನಿಸುವ ಕಾರ್ಯಕ್ರಮ ಇರಿಸಿಕೊಂಡಿದ್ದಾರೆ. ಬಹಳ ಒಳ್ಳೆಯ ಕೆಲಸ ಇದು. ಅವರ ಸಾಧನೆ ಸಮಾಜಕ್ಕೆ ಪ್ರೇರಣೆ ಕೊಡಬೇಕು. ಅದೇ ರೀತಿ ಮಹಿಳೆಯರು ಸಂಸ್ಕಾರಗಳನ್ನು ಉಳಿಸಿ ಬೆಳಗಿಸುವಲ್ಲಿ ಸಹಕಾರಿಗಳಾಗಬೇಕು. ನಾವು ಕಳೆದುಕೊಳ್ಳುವುದು ಸುಲಭ. ಗಳಿಸುವುದು ಕಷ್ಟ. ಹಾಗಾಗಿ ನಮ್ಮಲ್ಲಿನ ವಿಶೇಷ ಗುಣಗಳನ್ನು ಉಳಿಸಿ ಸಮಾಜಕ್ಕೆ ಉತ್ತಮ ಮಾದರಿಗಳಾಗೋಣ" ಎಂದರು.

ಇನ್ನೋರ್ವ ಮುಖ್ಯ ಅತಿಥಿ ಕಾರ್ಪೋರೇಶನ್ ಬ್ಯಾಂಕಿನ ಮುಖ್ಯ ಮಹಾಪ್ರಬಂಧಕ ಶ್ರೀ ಎಂ. ನರೇಂದ್ರ "ಕಾರ್ಪೋರೇಶನ್ ಬ್ಯಾಂಕ್ ಹಾಗೂ ಶ್ರೀ ಸುಬ್ರಹ್ಮಣ್ಯ ಸಭೆ ನೂರು ವರ್ಷ ಪೂರೈಸಿದೆ. ಈ ಎರಡೂ ಸಂಸ್ಥೆಗಳಿಗೆ ಶುಭಾಶಯಗಳು. ನೂರು ವರ್ಷಗಳ ಹಿಂದೆ ವಿದ್ಯಾಭ್ಯಾಸಕ್ಕೆ ಬಹಳ ತೊಂದರೆಗಳಿದ್ದವು. ಆ ಸಂದರ್ಭದಲ್ಲಿ ಪ್ರಾರಂಭಿಸಲ್ಪಟ್ಟ ಈ ಸಂಸ್ಥೆ ಹಲವರಿಗೆ ವಿದ್ಯಾಭ್ಯಾಸಕ್ಕೆ ಸಹಕಾರಿಯಾಗಿದೆ. ಈ ಸಂಸ್ಥೆಯ ಹುಟ್ಟಿಗೆ ಕಾರಣರಾದ ಮಹನೀಯರು ಶ್ಲಾಘನೀಯರು. ಯಾವುದೇ ಸಂಸ್ಥೆಯನ್ನು ನೂರು ವರ್ಷ ಮುನ್ನಡೆಸುವುದು ಸುಲಭವಲ್ಲ. ಈ ನಿಟ್ಟಿನಲ್ಲಿ ಶ್ರೀ ಸುಬ್ರಹ್ಮಣ್ಯ ಸಭೆ ಶತಮಾನವನ್ನು ಕಂಡಿರುವುದು ಸಂತಸದ ವಿಚಾರ. ಶತಮಾನೋತ್ಸವದ ಹರ್ಷವು ಇನ್ನೂ ಮುಂದುವರೆಯಲಿ. ಹಲವು ಶತಮಾನೋತ್ಸವಗಳು ಜರಗಲಿ" ಎಂದು ಅಭಿಪ್ರಾಯಪಟ್ಟರು.

ಇನ್ನೋರ್ವ ಮುಖ್ಯ ಅತಿಥಿ ಶ್ರೀ ಬೈಲೂರು ಬಾಲಚಂದ್ರರಾವ್ ತಮ್ಮ ಮನದಾಳದ ಮಾತುಗಳನ್ನು ಈ ರೀತಿ ಪ್ರಸ್ತುತ ಪಡಿಸಿದರು. "ಯಾವುದೇ ಸಂಸ್ಥೆಯನ್ನು ಕಟ್ಟುವುದು ಸುಲಭ. ಅದನ್ನು ಉಳಿಸುವುದು, ಬೆಳೆಸುವುದು ಕಷ್ಟ. ವಿದ್ಯಾಥಿಗಳಿಗಾಗಿ ಇಲ್ಲಿ ವಿದ್ಯಾರ್ಥಿ ನಿಲಯವಿದೆ. ವಿದ್ಯಾರ್ಜನೆಗೆ ವಿದ್ಯಾರ್ಥಿವೇತನವಿದೆ. ಇದು ನಮ್ಮ ಹಿರಿಯರು ಹಾಕಿ ಕೊಟ್ಟ ದಾರಿ. ಇದು ನಮಗೆ ಸದಾ ಆದರ್ಶಪ್ರಾಯವಾಗಿರಲಿ. ಅವರನ್ನು ನಾವು ಸದಾ ಸ್ಮರಿಸಬೇಕು.

ಶತಮಾನೋತ್ಸವದ ಕಾರ್ಯಕ್ರಮಗಳು ವೈವಿಧ್ಯಮಯವಾಗಿದೆ. ಇಲ್ಲಿ ಹಲವು ಸಾಧಕರನ್ನು ಸನ್ಮಾನಿಸುವ ಕಾರ್ಯಕ್ರಮವಿದೆ. ಇಲ್ಲಿ ಸನ್ಮಾನಿಸಲ್ಪಡುವವರು ಬೇರೆ ಬೇರೆ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರು, ವಿವಿಧ ಕ್ಷೇತ್ರಗಳಾದ ಕ್ರೀಡೆ, ಆರೋಗ್ಯ, ಶೈಕ್ಷಣಿಕ, ಸಮಾಜಸೇವೆ ಇಲ್ಲೆಲ್ಲಾ ಸಾದನೆ ಮಾಡಿದವರು ಸನ್ಮಾನಿಸಲ್ಪಡುತ್ತಿದ್ದಾರೆ. ಹೀಗಾಗಿ ಸುಬ್ರಹ್ಮಣ್ಯ ಸಭೆಯಲ್ಲಿನ ಎಲ್ಲರೂ ಪ್ರೀತಿ ಸೌಹಾರ್ದತೆಯನ್ನು ಸಮಾಜದಿಂದ ಪಡೆದುಕೊಂಡಿದ್ದಾರೆ. ಸಂಸ್ಕೃತಿ, ಸಂಸ್ಕಾರಗಳನ್ನು ಇಲ್ಲಿನ ಮಹಿಳೆಯರಿಂದ ಕಲಿಯಬೇಕು. ಯುವಕರ ತಂಡ ಮಾಡುವ ಕೆಲಸ ಕಾರ್ಯಗಳು ಅಪಾರ ಸಮಾಜಕ್ಕೆ ಉಪಯುಕ್ತವಾಗಿ ವಿಸ್ತೃತ ವಿದ್ಯಾರ್ಥಿನಿಲಯ ಇದೆ. ಸಭಾಭವನ ಮೂಡಿದೆ. ಈ ಎಲ್ಲಾ ಕಾರಣಗಳಿಂದ ಶ್ರೀ ಸುಬ್ರಹ್ಮಣ್ಯ ಸಭೆಯ ಎಲ್ಲಾ ಸದಸ್ಯರು ಅಭಿನಂದನಾರ್ಹರು" ಎಂದು ಅಭಿಪ್ರಾಯಪಟ್ಟರು.

ಅಧ್ಯಕ್ಷೀಯ ಭಾಷಣದಲ್ಲಿ ಶ್ರೀ ಎಂ.ಆರ್. ವಾಸುದೇವ "ಹೊಸಚಿಗುರು ಹಳೆಬೇರು ಕೂಡಿರಲು ಮರಸೊಬಗು. ರಾಜರ್ಷಿ ಡಾ.ಡಿ. ವೀರೇಂದ್ರ ಹೆಗ್ಗಡೆಯವರ ಹಿರಿತನದಲ್ಲಿ ಹಳೆಬೇರಿನ ಜತೆ ಹೊಸಚಿಗುರಿನೋಪಾದಿಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಬೆಳೆದಿದೆ. ಹಾಗೆಯೇ ಸುಬ್ರಹ್ಮಣ್ಯ ಸಭೆಯು ಶತಮಾನೋತ್ಸವದ ಸಂದರ್ಭದಲ್ಲಿ ಅದೇ ಹರುಷದಿಂದ ಬೀಗುತ್ತಿದೆ. ಶ್ರೀ ಕ್ಷೇತ್ರದಿಂದ ವಿದ್ಯೆಗೆ ಯಾವರೀತಿ ಮಹತ್ವ ನೀಡಲಾಗೆದೆಯೋ ಅದೇ ರೀತಿ ಸುಬ್ರಹ್ಮಣ್ಯ ಸಭೆಯು ಸಣ್ಣಮಟ್ಟದಲ್ಲಿ ವಿದ್ಯಾರ್ಜನೆಗೆ ಸಹಾಯ ಮಾಡುತ್ತಿದೆ. ಶತಮಾನೋತ್ಸವದ ಮೂಲಕ ನಮ್ಮ ಬಗ್ಗೆ ಡಂಗುರವನ್ನು ನಾವೇ ಸಾರಿ ಸಮಾಜದ ಮುಂದೆ ನಿಂತಿದ್ದೇವೆ. ನಮ್ಮನ್ನು ನಾವು ಪ್ರಸ್ತುತ ಪಡಿಸುವ ಕೆಲಸವನ್ನು ನಾವು ಮಾಡಿದ್ದೇವೆ" ಎಂದರು.

ಎರಡನೆಯ ದಿನದ ಸನ್ಮಾನ ಕಾರ್ಯಕ್ರಮದಲ್ಲಿ ಸನ್ಮಾನಿಸಲ್ಪಟ್ಟವರು ಇವರು.

ಶ್ರೀ ಎ. ಈಶ್ವರಯ್ಯ (ಸಾಹಿತ್ಯ), ಶ್ರೀ ಮನೋಹರ ಪ್ರಸಾದ್ (ಪತ್ರಿಕೋದ್ಯಮ), ಕು. ತನ್ವಿರಾವ್ (ಬಾಲಪ್ರತಿಭೆ), ಶ್ರೀ ಶಿವರಾವ್ (ಸಮಾಜಸೇವೆ), ಡಾ. ಬಿ. ಎಚ್. ಶ್ರೀಪತಿ ರಾವ್ (ವೈದ್ಯಕೀಯ), ಶ್ರೀ ಎಂ. ಆರ್. ವಾಸುದೇವ (ವಿಶೇಷ ಸಾಧನೆ), ಶ್ರೀ ಎಂ. ವ್ಯಾಸ (ಸಾಹಿತ್ಯ), ಶ್ರೀ ಬಿ. ಅರ್. ವಸಂತ್ (ಆದರ್ಶ ವ್ಯಕ್ತಿತ್ವ), ಶ್ರೀ ಎನ್.ಡಿ. ಜಗನ್ನಾಥ 'ರಾವ್ (ಆದರ್ಶ ವ್ಯಕ್ತಿತ್ವ), ಶ್ರೀ ಟಿ.ಆರ್. ಸುಬ್ರಹ್ಮಣ್ಯರಾವ್

(5ನೇ ಪುಟಕ್ಕೆ ...)

## ಪ್ರಕಟಣೆ

ಸಮಾಜದ ಬಡ ಕುಟುಂಬಗಳಿಂದ ಬರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವೃತ್ತಿ ಶಿಕ್ಷಣ ಪಡೆಯಲು ಡಾ. ದಯಾನಂದ ಎಸ್.ರಾವ್ ಎಜುಕೇಶನಲ್ ಟ್ರಸ್ಟ್, ಬೆಂಗಳೂರು ಇವರ ವತಿಯಿಂದ 2008–09ನೇ ಸಾಲಿಗೆ ಶ್ರೀ ಎ.ಕೆ. ರಘುರಾಮ ರಾವ್ ಸ್ಮಾರಕ ರೂ.1,00001/– ಹಾಗೂ ಶ್ರೀ ಎಚ್. ವಾಸುದೇವ ಸ್ಮಾರಕ ರೂ.1,00000/–ನ್ನು ಒದಗಿಸುವರು. ಈ ನಿಧಿಯಿಂದ ಪ್ರಾಯೋಜಿಸಲ್ಪಟ್ಟ ಸಾಲ ವಿದ್ಯಾರ್ಥಿ ವೇತನ ಅರ್ಜಿಗಳನ್ನು ಕರೆಯಲಾಗಿದೆ. ಅರ್ಹ ವಿದ್ಯಾರ್ಥಿಗಳು ಬಿಳಿ ಹಾಳೆಯಲ್ಲಿ ಕಾರ್ಯದರ್ಶಿ ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ, ಮಂಗಳೂರು 575003 ಇವರಿಗೆ ಅರ್ಜಿಯನ್ನು ಕಳುಹಿಸಲು ಕೋರಲಾಗಿದೆ. ಹಿಂದಿನ ಪರೀಕ್ಷೆಯ ಅಂಕಪಟ್ಟಿಯ ಪ್ರತಿ ಹಾಗೂ ಕಲಿಕಾ ಪ್ರಮಾಣ ಪತ್ರವನ್ನು ಅರ್ಜಿಗೆ ಲಗತ್ತೀಕರಿಸಬೇಕು.

ಅಂತೆಯೇ ಈ ಹಿಂದೆ ಸಾಲ ವಿದ್ಯಾರ್ಥಿ ವೇತನವನ್ನು ಪಡೆದು ವಿದ್ಯಾಭ್ಯಾಸವನ್ನು ಮುಂದುವರಿಸುವ ವಿದ್ಯಾರ್ಥಿಗಳು 2008–09ನೇ ಸಾಲಿನ ಸಾಲ ವಿದ್ಯಾರ್ಥಿ ವೇತನದ ಕಂತನ್ನು ಪಡೆದುಕೊಳ್ಳಬಹುದು. ಅವರು ಶ್ರೀಮತಿ ಮಮತಾ ರಾವ್ ಕಾರ್ಯದರ್ಶಿ ಶ್ರೀ ಸುಬ್ರಹ್ಮಣ್ಯ ಸಹಕಾರಿ ಸಂಘ ಮಂಗಳುರು. ಫೋನ್ : 0824–2491895, ಇವರನ್ನು ಸಂಪರ್ಕಿಸಬೇಕಾಗಿ ಕೋರಲಾಗಿದೆ.

**ಹೆಚ್ಚಿನ ಮಾಹಿತಿಗಳಿಗೆ ಶ್ರೀ ಕರುಣ್‌ರಾವ್ ಬೆಳ್ಳೆ, ಕಾರ್ಯದರ್ಶಿ**
**ಫೋನ್ : 92433 09120 ಇವರನ್ನು ಸಂಪರ್ಕಿಸಬಹುದು.**

**ಶ್ರೀ ಕರುಣ್‌ರಾವ್ ಬೆಳ್ಳೆ, ಕಾರ್ಯದರ್ಶಿ**

## ಸಹಕಾರಿ ಸಂಘಕ್ಕೆ ಆಡಳಿತಾಧಿಕಾರಿ ಬೇಕಾಗಿದ್ದಾರೆ

**ವಿದ್ಯಾರ್ಹತೆ-ಬಿಕಾಂ (ಕಂಪ್ಯೂಟರ್ ಮಾಹಿತಿ)**

**ಅಥವಾ**

**ಜೆಡಿಸಿ ಅಥವಾ ಎಚ್‌ಡಿಸಿ ಅಥವಾ ನಿವೃತ್ತ ಬ್ಯಾಂಕ್ ನೌಕರರು ಸಂಪೂರ್ಣ ವಿವರಗಳೊಂದಿಗೆ ಕೂಡಲೇ ಈ ಕೆಳಗಿನ ವಿಳಾಸಕ್ಕೆ ಅರ್ಜಿ ಸಲ್ಲಿಸಲು ಕೋರಲಾಗಿದೆ.**

**ಅಧ್ಯಕ್ಷರು**

**ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ರಿ.),**
**ಬಿಜೈ ರಸ್ತೆ, ಕರಂಗಲಪಾಡಿ, ಮಂಗಳೂರು - 2.**